**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/402/2015/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 17th June, 2022.

# RECOMMENDATION

Sub: Departmental Inquiry against Shri Sangamesha @ Sanganabasava, Village Accountant, Yaddalli Grama, Yadgir Taluk, Yadgir District–reg.,

Ref: 1) Government Order No.ಕಂಇ 39 ಬಿಡಿಪಿ 2015, Bengaluru, dated: 14/07/2015.

2) Nomination Order No.UPLOK-1/DE/402/2015, Bengaluru, dated: 03/08/2015 of Upalokayukta, State of Karnataka, Bengaluru.

3) Inquiry Report dated: 09/06/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 14/07/2015 initiated the disciplinary proceedings against Shri Sangamesha @ Sanganabasava, Village Accountant, Yaddalli Grama, Yadgir Taluk, Yadgir District (hereinafter referred to as Delinquent Government

Official, for short as DGO) and entrusted the Departmental Inquiry to this Institution.

2. This Institution by Nomination Order No. UPLOK-1/DE/402/2015, Bengaluru, dated: 03/08/2015 nominated Additional Registrar of Enquiries-6, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1/DE/2016, Bengaluru, dated:03/08/2016, the Additional Registrar of Enquiries-7, Karnataka Lokayukta, Bengaluru was re-nominated as Inquiry Officer. Again, by Order No.LOK/DE/Transfers/2018, Bengaluru, dated: 06/08/2018, the Additional Registrar of Enquiries-14, Karnataka Lokayukta, Bengaluru was re-nominated as Inquiry Officer to conduct Departmental Inquiry against DGO.

3. The DGO, Shri Sangamesha @ Sanganabasava, Village Accountant, Yaddalli Grama, Yadgir Taluk, Yadgir District was tried for the following charges:

## ಅನುಬಂಧ-1

## ದೋಷಾರೋಪಣೆ:

ನೀವು ಶ್ರೀ. ಸಂಗಮೇಶ್ @ ಸಂಗನಬಸವ ಯಾದಗಿರಿ ಜಿಲ್ಲೆ ಹಾಗೂ ತಾಲ್ಲೂಕಿನ ಯಡ್ಡಳ್ಳಿ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುವಾಗ ದೂರುದಾರ ಶ್ರೀ. ಕಾಶಪ್ಪ ತಂದೆ ಬಸವಂತಪ್ಪ ಬಾಡದವರ ಅನೂರ (ಬಿ) ಗ್ರಾಮ ತಾಲ್ಲೂಕು ಹಾಗೂ ಜಿಲ್ಲೆ ಯಾದಗಿರಿ ಅವರು ತಮ್ಮ ಮಗಳ ಗಂಡನಾದ ಶ್ರೀ. ಶರಣಪ್ಪ ಅವರ ತಂದೆ ದಿ. ಚಂದ್ರಪ್ಪ ಹೆಸರಿನಲ್ಲಿದ್ದ ಯಾದಗಿರಿ ತಾಲ್ಲೂಕಿನ ಹೊರಂಚ ಗ್ರಾಮದ ಸ.ನಂ.111, 112 ಹಾಗೂ 174 ಇವರುಗಳ ಖಾತೆಯನ್ನು ಶ್ರೀ. ಶರಣಪ್ಪ ಅವರ ಹೆಸರಿನಲ್ಲಿ ಮಾಡಿಸಲು 23/05/2013 ಕ್ಕಿಂತ 3 ತಿಂಗಳ ಮೊದಲು ಅವರಿಬ್ಬರೂ ನಿಮ್ಮನ್ನು ಭೇಟಿಯಾದಾಗ ಖಾತಾ ಬದಲಾವಣೆಯ ಖರ್ಚಿನ ಹಣವೆಂದು ಅವರಿಂದ ರೂ.6,500/- ಗಳ ಲಂಚವನ್ನು ಪಡದುಕೊಂಡು ಅವರಿಂದ ಒಂದು ಅರ್ಜಿಯನ್ನು ಪಡೆದುಕೊಂಡಿದ್ದೀರಿ;

ದಿನಾಂಕ: 22/03/2013 ರಂದು ನೀವು ದೂರುದಾರ ಕಾಶಪ್ಪ ಹಾಗೂ ಅವರ ಅಳಿಯ ಶ್ರೀ. ಶರಣಪ್ಪ ಅವರನ್ನು ಯಾದಗಿರಿಯ ತಾಲ್ಲೂಕು ಕಛೇರಿಗೆ ಕರೆತಂದು ಒಂದು ತಿಂಗಳಿನ ಅವಧಿಯಲ್ಲಿ ಖಾತಾ ಬದಲಾವಣೆ ಮಾಡಿಕೊಡುವುದಾಗಿ ಹೇಳಿದ್ದೀರಿ;

ದಿನಾಂಕ: 23/05/2013 ಕ್ಕಿಂತ 10 ದಿನ ಮೊದಲು ದೂರುದಾರರು ನಿಮ್ಮನ್ನು ಪುನಃ ಅವರ ಅಳಿಯ ಶರಣಪ್ಪ ಅವರ ಜಮೀನು ಖಾತಾ ಮಾಡುವ ಬಗ್ಗೆ ವಿಚಾರಿಸಿದಾಗ ನೀವು ಆ ಕೆಲಸ ಮಾಡಿಕೊಡಲು ಇನ್ನೂ ಹಣ ಕೊಡಬೇಕಾಗುತ್ತದೆಂದು ಹೇಳಿದ್ದೀರಿ ಹಾಗೂ ಅವರು ಇನ್ನೂ ಕೊಡಬೇಕಾದ ಹಣದ ಮೊತ್ತದ ಬಗ್ಗೆ ವಿಚಾರಿಸಿದಾಗ ನೀವು ಅವರನ್ನು ಯಾದಗಿರಿಯ ನಿಮ್ಮ ಕೊಠಡಿಗೆ ಬರಲು ಹೇಳಿದ್ದೀರಿ;

ದಿನಾಂಕ: 21/05/2013 ರಂದು ದೂರುದಾರರು ಯಾದಗಿರಿಯ ನಿಮ್ಮ ಕೊಠಡಿಗೆ ಬಂದು ಭೇಟಿಯಾದಾಗ ನೀವು ಅವರಿಗೆ ಖಾತಾ ಬದಲಾವಣೆ ಕೆಲಸಕ್ಕೆ ಇನ್ನು ರೂ.15,000/- ಕೊಡಲು ಕೇಳಿದ್ದೀರಿ ಹಾಗೂ ಅವರು ಸ್ವಲ್ಪ ಕಡಿಮೆ ಮಾಡಲು ಕೇಳಿದಾಗಿ ನೀವು ಅವರಿಗೆ ರೂ.13,000/- ಲಂಚ ನೀಡಲು ಕೇಳಿದ್ದೀರಿ;

ದಿನಾಂಕ: 21/05/2013 ರಂದು ಯಾದಗಿರಿ ನಗರದ ಸ್ಟೇಷನ್ ಭಾಗದಲ್ಲಿಯ ಶಿವನಗರದ ನಿಮ್ಮ ಕೊಠಡಿಯಲ್ಲಿ ದೂರುದಾರರ ಅಳಿಯ ಶರಣಪ್ಪ ಅವರ

ಜಮೀನುಗಳ ಖಾತೆ ಮಾಡುವ ಕೆಲಸಕ್ಕಾಗಿ ದೂರುದಾರರಿಂದ ರೂ.13,000/- ಗಳನ್ನು ಲಂಚವೆಂದು ಪಡೆದುಕೊಂಡಿದ್ದೀರಿ;

ದಿನಾಂಕ: 23/05/2013 ರಂದು ನಿಮ್ಮ ಕೊಠಡಿಯಲ್ಲಿ ನಿಮ್ಮ ವಶದಿಂದ ರೂ.13,000/- ಗಳನ್ನು ವಶಪಡಿಸಿಕೊಳ್ಳಲಾಗಿತ್ತು ಹಾಗೂ ಆ ಹಣ ನಿಮ್ಮ ಬಳಿ ಇದ್ದ ಬಗ್ಗೆ ಸೂಕ್ತ ಮತ್ತು ಸಮರ್ಪಕ ಉತ್ತರ ನೀಡುವಲ್ಲಿ ವಿಫಲರಾಗಿದ್ದೀರಿ. ಸರ್ಕಾರಿ ನೌಕರರಾಗಿ ಸಂಪೂರ್ಣ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಪ್ರದರ್ಶಿಸುವಲ್ಲಿ ವಿಫಲರಾಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i)(ii) ಮತ್ತು (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'not proved' the charges leveled against the DGO, Shri Sangamesha @ Sanganabasava, Village Accountant, Yaddalli Grama, Yadgir Taluk, Yadgir District.

5. On perusal of the Inquiry Report, in order to prove the guilt of the DGO, the Disciplinary Authority has examined four witnesses i.e., PW-1 to PW-4 and Ex. P-1 and P-17 documents were marked. In fact, DGO was also examined himself as DW-1 and Ex. D-1 to D-4 documents were marked.

6. On overall appreciation of the evidence of PW-1 to PW-4 and DW-1 as well as the documents Ex. P-1 to P-17 and Ex. D-1 to D-4, it reveal that, the complainant who made allegations against the DGO has not supported the case of the Disciplinary Authority. In addition to the above, the shadow witness also in the course of cross-examination has categorically admitted that, he did not know anything about the trap and he did not hear the conversation between the complainant and the DGO and there is lot of discrepancies in the evidence of PW-3 with regard to the recovery of the tainted currency notes from the DGO. Looking from above said materials available on record, there is no reason to deviate from the opinion expressed by the Inquiry Officer.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to exonerate DGO, Shri Sangamesha @ Sanganabasava, Village Accountant, Yaddalli Grama, Yadgir Taluk, Yadgir District, of the charges leveled against him.

8. Action taken in the matter shall be intimated to this Authority.

Connected records are enclosed herewith.

K.N. Phaneendra 17/6/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-402/2015/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 09/06/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಸಂಗಮೇಶ @ ಸಂಗನಬಸವ,** ಗ್ರಾಮ ಲೆಕ್ಕಿಗರು, ಯಡ್ಡಳ್ಳಿ ಗ್ರಾಮ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1260/2014/ಉನಿವಿ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 26/03/2015.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಬಿಡಿಪಿ 2015, ಬೆಂಗಳೂರು, ದಿನಾಂಕ: 14/07/2015.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/402/2015, ಬೆಂಗಳೂರು ದಿನಾಂಕ: 03/08/2015.
4. Order No.UPLOK-1/DE/2016 Bangalore, Dtd: 03/08/2016 file is transferred from ARE-6 to ARE-7.
5. Order No.LOK/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಯಾದಗಿರಿ ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ

"ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ವಯ ಶ್ರೀ. **ಸಂಗಮೇಶ @ ಸಂಗನಬಸವ,** ಗ್ರಾಮ ಲೆಕ್ಕಿಗರು, ಯಡ್ಡಳ್ಳಿ ಗ್ರಾಮ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರಾದ ಶ್ರೀ. **ಕಾಶಪ್ಪ ಬಿನ್ ಬಸವಂತಪ್ಪ ಬಾಡದವರ,** ಅನೂರ (ಬಿ), ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 14/07/2015ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 03/08/2015 ರಂದು ಅಪರ ನಿಬಂಧಕರು, ವಿಚಾರಣೆಗಳು-6 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-6 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿರುತ್ತದೆ. ನಂತರ ಉಲ್ಲೇಖ (5) ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀ. ಸಂಗಮೇಶ @ ಸಂಗನಬಸವ, ಗ್ರಾಮ ಲೆಕ್ಕಿಗರು, ಯಡ್ಡಳ್ಳಿ ಗ್ರಾಮ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು ವಿಚಾರಣೆಗಳು-6 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 25/08/2015 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

ನೀವು ಶ್ರೀ. ಸಂಗಮೇಶ್ @ ಸಂಗನಬಸವ ಯಾದಗಿರಿ ಜಿಲ್ಲೆ ಹಾಗೂ ತಾಲ್ಲೂಕಿನ ಯಡ್ಡಳ್ಳಿ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುವಾಗ ದೂರುದಾರ ಶ್ರೀ. ಕಾಶಪ್ಪ ತಂದೆ ಬಸವಂತಪ್ಪ ಬಾಡದವರ ಅನೂರ (ಬಿ) ಗ್ರಾಮ ತಾಲ್ಲೂಕು ಹಾಗೂ ಜಿಲ್ಲೆ ಯಾದಗಿರಿ ಅವರು ತಮ್ಮ ಮಗಳ ಗಂಡನಾದ ಶ್ರೀ. ಶರಣಪ್ಪ ಅವರ ತಂದೆ ದಿ. ಚಂದ್ರಪ್ಪ ಹೆಸರಿನಲ್ಲಿದ್ದ ಯಾದಗಿರಿ ತಾಲ್ಲೂಕಿನ ಹೊರಂಚ ಗ್ರಾಮದ ಸ.ನಂ.111, 112 ಹಾಗೂ 174 ಇವರುಗಳ ಖಾತೆಯನ್ನು ಶ್ರೀ. ಶರಣಪ್ಪ ಅವರ ಹೆಸರಿನಲ್ಲಿ ಮಾಡಿಸಲು 23/05/2013 ಕ್ಕಿಂತ 3 ತಿಂಗಳ ಮೊದಲು ಅವರಿಬ್ಬರೂ ನಿಮ್ಮನ್ನು ಭೇಟಿಯಾದಾಗ ಖಾತಾ ಬದಲಾವಣೆಯ ಖರ್ಚಿನ ಹಣವೆಂದು ಅವರಿಂದ ರೂ.6,500/- ಗಳ ಲಂಚವನ್ನು ಪಡದುಕೊಂಡು ಅವರಿಂದ ಒಂದು ಅರ್ಜಿಯನ್ನು ಪಡೆದುಕೊಂಡಿದ್ದೀರಿ;

ದಿನಾಂಕ: 22/03/2013 ರಂದು ನೀವು ದೂರುದಾರ ಕಾಶಪ್ಪ ಹಾಗೂ ಅವರ ಅಳಿಯ ಶ್ರೀ. ಶರಣಪ್ಪ ಅವರನ್ನು ಯಾದಗಿರಿಯ ತಾಲ್ಲೂಕು ಕಛೇರಿಗೆ

ಕರೆತಂದು ಒಂದು ತಿಂಗಳಿನ ಅವಧಿಯಲ್ಲಿ ಖಾತಾ ಬದಲಾವಣೆ ಮಾಡಿಕೊಡುವುದಾಗಿ ಹೇಳಿದ್ದೀರಿ;

ದಿನಾಂಕ: 23/05/2013 ಕ್ಕಿಂತ 10 ದಿನ ಮೊದಲು ದೂರುದಾರರು ನಿಮ್ಮನ್ನು ಪುನಃ ಅವರ ಅಳಿಯ ಶರಣಪ್ಪ ಅವರ ಜಮೀನು ಖಾತಾ ಮಾಡುವ ಬಗ್ಗೆ ವಿಚಾರಿಸಿದಾಗ ನೀವು ಆ ಕೆಲಸ ಮಾಡಿಕೊಡಲು ಇನ್ನೂ ಹಣ ಕೊಡಬೇಕಾಗುತ್ತದೆಂದು ಹೇಳಿದ್ದೀರಿ ಹಾಗೂ ಅವರು ಇನ್ನೂ ಕೊಡಬೇಕಾದ ಹಣದ ಮೊತ್ತದ ಬಗ್ಗೆ ವಿಚಾರಿಸಿದಾಗ ನೀವು ಅವರನ್ನು ಯಾದಗಿರಿಯ ನಿಮ್ಮ ಕೊಠಡಿಗೆ ಬರಲು ಹೇಳಿದ್ದೀರಿ;

ದಿನಾಂಕ: 21/05/2013 ರಂದು ದೂರುದಾರರು ಯಾದಗಿರಿಯ ನಿಮ್ಮ ಕೊಠಡಿಗೆ ಬಂದು ಭೇಟಿಯಾದಾಗ ನೀವು ಅವರಿಗೆ ಖಾತಾ ಬದಲಾವಣೆ ಕೆಲಸಕ್ಕೆ ಇನ್ನು ರೂ.15,000/- ಕೊಡಲು ಕೇಳಿದ್ದೀರಿ ಹಾಗೂ ಅವರು ಸ್ವಲ್ಪ ಕಡಿಮೆ ಮಾಡಲು ಕೇಳಿದಾಗಿ ನೀವು ಅವರಿಗೆ ರೂ.13,000/- ಲಂಚ ನೀಡಲು ಕೇಳಿದ್ದೀರಿ;

ದಿನಾಂಕ: 21/05/2013 ರಂದು ಯಾದಗಿರಿ ನಗರದ ಸ್ಟೇಷನ್ ಭಾಗದಲ್ಲಿಯ ಶಿವನಗರದ ನಿಮ್ಮ ಕೊಠಡಿಯಲ್ಲಿ ದೂರುದಾರರ ಅಳಿಯ ಶರಣಪ್ಪ ಅವರ ಜಮೀನುಗಳ ಖಾತೆ ಮಾಡುವ ಕೆಲಸಕ್ಕಾಗಿ ದೂರುದಾರರಿಂದ ರೂ.13,000/- ಗಳನ್ನು ಲಂಚವೆಂದು ಪಡೆದುಕೊಂಡಿದ್ದೀರಿ;

ದಿನಾಂಕ: 23/05/2013 ರಂದು ನಿಮ್ಮ ಕೊಠಡಿಯಲ್ಲಿ ನಿಮ್ಮ ವಶದಿಂದ ರೂ.13,000/- ಗಳನ್ನು ವಶಪಡಿಸಿಕೊಳ್ಳಲಾಗಿತ್ತು ಹಾಗೂ ಆ ಹಣ ನಿಮ್ಮ ಬಳಿ ಇದ್ದ ಬಗ್ಗೆ ಸೂಕ್ತ ಮತ್ತು ಸಮರ್ಪಕ ಉತ್ತರ ನೀಡುವಲ್ಲಿ ವಿಫಲರಾಗಿದ್ದೀರಿ. ಸರ್ಕಾರಿ ನೌಕರರಾಗಿ ಸಂಪೂರ್ಣ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಪ್ರದರ್ಶಿಸುವಲ್ಲಿ ವಿಫಲರಾಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i)(ii) ಮತ್ತು

(iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)

On the basis of a report of the Additional Director General of Police in Karnataka Lokayukta at Bengaluru, along with investigation papers filed by the Police Inspector in Karnataka Lokayukta at Yadagiri District (hereinafter referred to as **Investigating Officer** – I.O. for short), alleging that one Sri. Sangamesh @ Sanganabasav, Village Accountant, Yaddalli Grama, Yadagiri Taluk, Yadagiri District (hereinafter referred to as **'DGO'** for short), being a Public/Government Servant, has committed misconduct, when approached by Sri. Kashappa S/o Basavanthappa Badhadawara R/o Anoora (B) in Yadagiri Taluk of Yadagiri District (hereinafter referred to as **'Complainant'** for short). An investigation was taken up by the Hon'ble

Upalokayukta u/s.9 of the Karnataka Lokayukta Act, 1984, after invoking power vested u/s.7(2) of the said Act, as misconduct has been found to have been committed by the DGO, from the records.

**2) The brief facts of the case:**

(a) Complainant's daughter namely, Smt. Yellamma has been given in marriage to the second son of Sri. Chandrappa namely, Sri. Sharanappa left behind by said Sri. Chandrappa before about 10 years along with land Sy. Nos.111, 112, 174 & 211 totally measuring about 20 acres situated within the limits of Horunch Village in Yadagiri Taluk & District. So, before about three months of 23/05/2013, he met DGO along with his son-in-law namely, Sri. Sharanappa in connection with getting mutation of said lands. And in that regard, the DGO had taken 6,500/- telling that same is required for office expenses;

(b) Thereafter, on taking application from said Sri. Sharanappa the DGO brought them to Taluk Office at Yadagiri on 22/03/2013

&

and told that within a month, said work will be got done. But said work was not attended by the DGO even for about one and half months thereafter;

(c) So, having kept quiet for said period of one and half months, before about 10 days of 23/05/2013, when the DGO was enquired about the said work, the DGO told that still amount is required to be paid to get the said work done. For that, given to him (DGO) and still how much amount requires to be paid. For that, the DGO asked them to come to his room at Yadagiri to Taluk about it;

(d) So, being unwilling to pay bribe, he approached Lokayukta Police on 21/05/2013, when they met DGO at his room in Yadagiri and enquired about amount required to be paid, the DGO told them to pay Rs.15,000/-;

(e) For that, when they requested to reduce it, the DGO asked them to pay Rs.13,000/- on a day after next day, but not on the next day;

(f) Not only that on 23/05/2013, the DGO had taken the tainted (bribe) amount (of Rs.13,000/-) from him in connection with the said work at DGO's room in Shivanagar of station area at Yadagiri;

(g) Added to that, the DGO failed to give any satisfactory reply or explanation or account for the said (tainted) bribe amount found then, when questioned by the I.O;

(h) So, the DGO was caught hold was sized under a mahazar by the I.O on said date in the presence of panchas;

(i) Even there are statements of witnesses, including complainant, besides collected records and materials filed by the I.O., which show said repeated misconduct of respondent.

3) Therefore, an investigation was taken up against the DGO and an observation note was sent to him to show cause as to why recommendation should not be made to the Competent Authority for initiating departmental inquiry against him in connection with his misconduct. Thought the DGO gave his

reply, however, the same is not convincing to drop the proceedings.

4) The facts supported by the material on record prima-facie show that the DGO, being a Government Servant, has failed to maintain absolute devotion to duty and also acted in a manner unbecoming of a Government Servant, and thereby committed misconduct and made herself liable for disciplinary action.

5) Since the said facts and material on record prima-facie show that DGO has committed misconduct as per Rule 3(1)(ii) & (iii) of the KCS (Conduct) Rules, 1966, acting under section 12(3) of the Karnataka Lokayukta Act, recommendation was made to the Competent Authority to initiate disciplinary proceedings against the DGO and to entrust the inquiry to this Authority under Rule 14-A of the Karnataka Civil Services (Classification, Control & Appeal) Rules, 1957. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 30/09/2015 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೋಷಾರೋಪಣೆಯಲ್ಲಿ ಆರೋಪಿಸಿದ ಎಲ್ಲಾ ಆರೋಪಗಳು ಸುಳ್ಳು ಇರುತ್ತವೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಮತ್ತು ತಾನು ಯಾವುದೇ ಲಂಚದ ಹಣದ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಪಡೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ ನಿ.ಪಿ.3 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ರಘುನಾಥ ರವರು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಶ್ರೀ. ವೀರೇಶ್ ಕುಮಾರ್ ರವರು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿದಿದ್ದು, ನಿ.ಪಿ.5 ರಿಂದ ನಿ.ಪಿ.9 ರವರೆಗಿನ ದಾಖಲಾತಿಗಳನ್ನು ಗುರುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಬಷೀರುದ್ದೀನ್ ರವರನ್ನು ಪಿ.ಡಬ್ಲ್ಯೂ.4 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.10 ರಿಂದ ನಿ.ಪಿ.17 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ

ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.4 ರವರೆಗಿನ ದಾಖಲಾತಿಗಳನ್ನು ಗುರುಪಡಿಸಿಕೊಂಡಿರುತ್ತಾರೆ.

೮. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ಶ್ರೀ. ಕಾಶಪ್ಪ ಬಿನ್ ಬಸವಂತಪ್ಪ ಬಾಡದವರ, ಅನೂರ (ಬಿ), ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ತಮ್ಮ ದೂರಿನಲ್ಲಿ ಯಾದಗಿರಿ ತಾಲ್ಲೂಕು, ಹೊರಂಚ ಗ್ರಾಮದ ಚಂದ್ರಾಮ್ ತಂದೆ ಸಾಬಣ್ಣ, ಯಡಳ್ಳಿ ಇವರು ಸುಮಾರು 10 ವರ್ಷಗಳ ಹಿಂದೆ ಮೃತಪಟ್ಟಿದ್ದು, ಅವರ 2ನೇ ಮಗನಾದ ಶರಣಪ್ಪ ಇವರ ಜೊತೆಗೆ ದೂರುದಾರರ ಮಗಳಾದ ಯಲ್ಲಮ್ಮ ಇವರ ಜೊತೆ

ವಿವಾಹ ಆಗಿರುತ್ತದೆ. ದಿವಂಗತ ಚಂದ್ರಾಮ್ ಇವರ ಹೆಸರಿನಲ್ಲಿ ಹೊರಾಂಚ ಗ್ರಾಮದಲ್ಲಿ 20 ಎಕರೆ ಜಮೀನು ಸರ್ವೆ ನಂ.111, 112, 174 & 211ರಲ್ಲಿ ಇದ್ದು, ಚಂದ್ರಾಮ್ ಇವರು ಮೃತಪಟ್ಟಿದ್ದರಿಂದ, ಹಕ್ಕು ಬದಲಾವಣೆ ಮಾಡುವ ಬಗ್ಗೆ ದೂರನ್ನು ಸಲ್ಲಿಸುವ ಅಂದಾಜು 3 ತಿಂಗಳ ಮೊದಲು ದೂರುದಾರರ ಹಾಗೂ ಶರಣಪ್ಪ ಇವರು ಆ.ಸ.ನೌ ರವರನ್ನು ಭೇಟಿಯಾಗಿ ಹಕ್ಕು ಬದಲಾವಣೆಗೆ ಪ್ರಸ್ತಾಪಿಸಿದಾದ ಆ.ಸ.ನೌ ರವರು ಕಛೇರಿ ಖರ್ಚಿಗಾಗಿ ರೂ.6,500/–ಗಳು ಬೇಕಾಗುತ್ತದೆ ಅಂತಾ ಹೇಳಿ ಪಡೆದು ದಿನಾಂಕ: 22/03/2013 ರಂದು ಯಾದಗಿರಿ ತಹಶೀಲ್ದಾರ್ ಕಛೇರಿಗೆ ಕರೆದುಕೊಂಡು ಬಂದು ಒಂದು ಅರ್ಜಿಯನ್ನು ಪಡೆದು, ಒಂದು ತಿಂಗಳಲ್ಲಿ ಕೆಲಸ ಮಾಡಿಸಿ ಕೊಡುತ್ತೇನೆ ಅಂತಾ ಹೇಳಿರುತ್ತಾರೆ.

13. ಮುಂದುವರೆದು, ಒಂದುವರೆ ತಿಂಗಳ ನಂತರ ದೂರುದಾರರು ಆ.ಸ.ನೌ ರವರನ್ನು ಭೇಟಿಯಾಗಿ ವಿಚಾರಿಸಿದಾಗ, ಇನ್ನು ಹಣ ಬೇಕಾಗುತ್ತದೆ ಅಂತಾ ಹೇಳಿದ್ದು, ಇನ್ನು ಎಷ್ಟು ಬೇಕಾಗುತ್ತದೆ ಅಂತಾ ಕೇಳಿದಾಗ, ಆ.ಸ.ನೌ ರವರು ಯಾದಗಿರಿಯಲ್ಲಿರುವ ಇವರ ರೂಮಿಗೆ ಬಂದು ಭೇಟಿಯಾಗಲು ತಿಳಿಸಿರುತ್ತಾರೆ. ನಂತರ ದೂರುದಾರರಿಗೆ ಹೆಚ್ಚಿನ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ದಿನಾಂಕ: 21/05/2013 ರಂದು ಬೆಳಗ್ಗೆ ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದು ವಿಷಯ ತಿಳಿಸಿದಾಗ, ಪೋಲಿಸರು ಡಿಜಿಟಲ್ ವಾಯ್ಸ್ ರೆಕಾರ್ಡ್‌ಡರ್‌ನ್ನು ಕೊಟ್ಟಿರುತ್ತಾರೆ. ಅದೇ ದಿನ ಆ.ಸ.ನೌ ರವರು ವಾಸಿಸುವ ರೂಮಿಗೆ ಬಂದಿದ್ದು, ಅಲ್ಲಿ ಇನ್ನೊಬ್ಬ ತಲಾಟಿ ಸಹ ಇದ್ದು, ಆ.ಸ.ನೌ ರವರನ್ನು ಹಣದ ಬಗ್ಗೆ ವಿಚಾರಿಸಿದಾಗ ರೂ.15,000/–ಗಳನ್ನು ಕೊಡಲು ಹೇಳಿದ್ದು, ಸ್ವಲ್ಪ ಕಡಿಮೆ ಮಾಡಲು ಹೇಳಿದಾಗ ಅದಕ್ಕೆ ಕೊನೆಗೆ ರೂ.13,000/–ಗಳನ್ನು ಕೊಡಲು ಹೇಳಿದ್ದು, ಅಲ್ಲದೇ 2 ದಿನಗಳಲ್ಲಿ ತಂದು ಕೊಡಲು ಹೇಳಿದ್ದು, ಇದನ್ನು ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಿಸಿಕೊಂಡು ದಿನಾಂಕ: 23/05/2013 ರಂದು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ. ದೂರಿನ ಆಧಾರದ ಮೇಲೆ ತನಿಖಾಧಿಕಾರಿಗಳು ಅದನ್ನು ಠಾಣೆಯ ಗುನ್ನೆ ನಂ.5/2013 ಕಲಂ 7, 13(1)(ಡಿ) ಸಹ ಕಲಂ 13(2) ಪಿ.ಸಿ. ಕಾಯ್ದೆ 1988ರಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು ಇರುತ್ತದೆ.

&

ನಂತರ ತನಿಖಾಧಿಕಾರಿಗಳು ತನಿಖೆಯನ್ನು ಕೈಗೊಂಡು ಆ.ಸ.ನೌ/ಆಪಾದಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

14. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಳ್ಳಲಾಯಿತು. ನಿ.ಪಿ.1 ದೂರಿನ ಪ್ರತಿ; ನಿ.ಪಿ.2 ಹಣ ವಹಿಸಿಕೊಡುವ ಪಂಚನಾಮೆ; ನಿ.ಪಿ.3 ಹಣ ಜಪ್ತಿ ಪಂಚನಾಮೆ ಮತ್ತು ನಿ.ಪಿ.4 ದೂರುದಾರರ ಹೇಳಿಕೆ ಇರುತ್ತದೆ. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರ ಪರಿಚಯ ತನಗೆ ಇರುವುದಿಲ್ಲ, ಅವರನ್ನು ಭೇಟಿ ಮಾಡಿರುವುದಿಲ್ಲ ಮತ್ತು ಅವರನ್ನು ನೋಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮೃತ ಚಂದ್ರಾಮ್ ಇವರ ಪತ್ನಿ ಹಾಗು ಮಕ್ಕಳು ತಹಶೀಲ್ದಾರ್ ಕಛೇರಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಖಾತೆ ಮಾಡಲು ಅರ್ಜಿಯನ್ನು ಸಲ್ಲಿಸಿದ್ದರು. ತಾನು ತನ್ನ ಅಳಿಯ ಶರಣಪ್ಪನವರ ಜೊತೆಗೆ ಆ.ಸ.ನೌ ರವರನ್ನು ಭೇಟಿಯಾಗಿರುವುದಿಲ್ಲ. ಆ.ಸ.ನೌ ರವರು ಇವರ ಹತ್ತಿರ ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಿಲ್ಲ ಮತ್ತು ಪಡೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿ.ಪಿ.1 ರಲ್ಲಿ ಹೇಳಿದಂತೆ ತಾನು ದೂರನ್ನು ಸಲ್ಲಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ. ನಿ.ಪಿ.2 ಮತ್ತು 3 ರಲ್ಲಿ ಬರೆದ ವಿಷಯ ತನಗೆ ಗೊತ್ತಿಲ್ಲವೆಂದು ನುಡಿದಿದ್ದು, ನಿ.ಪಿ.4 ರಂತೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಆದ್ದರಿಂದ, ಮಂಡನಾಧಿಕಾರಿಗಳು ಇವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಿದಾಗ ಅವರು ಸೂಚಿಸಿದ ವಿಷಯವನ್ನು ಅಲ್ಲಗಳೆದಿರುತ್ತಾರೆ.

15. ಶಿಸ್ತು ಪ್ರಾಧಿಕಾರವು ಪಂಚರಾದ ಶ್ರೀ. ರಘುನಾಥ್ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 23/05/2013 ರಂದು ಬೆಳಗ್ಗೆ 10.15ಕ್ಕೆ ಯಾದಗಿರಿ ಲೋಕಾಯುಕ್ತ ಪೋಲಿಸರು ಇವರನ್ನು ಹಾಗೂ ಇನ್ನೊಬ್ಬ ಪಂಚರಾದ ಶ್ರೀ. ವೀರೇಶ್ ಕುಮಾರ್ ರವರನ್ನು ಲೋಕಾಯುಕ್ತ ಕಛೇರಿಗೆ ಪಂಚ ಸಾಕ್ಷಿ ಎಂದು

ಕರೆಸಿದ್ದು, ಆ ಪ್ರಕಾರ ಇವರು ಠಾಣೆಗೆ ಹೋಗಿರುತ್ತಾರೆ. ಅಲ್ಲಿ ದೂರುದಾರರನ್ನು ಪರಿಚಯಿಸಿ ದೂರಿನಗೆ ಅಂಶದ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ.

16. ದೂರುದಾರರು ಅಲ್ಲಿ ವಾಯ್ಸ್ ರೆಕಾರ್ಡ್‌ಡರ್‌ನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಸಂಭಾಷಣೆಯನ್ನು ಕೇಳಿಸಿರುತ್ತಾರೆ. ದೂರುದಾರರು ರೂ.1000/- ಮುಖಬೆಲೆಯ 13 ನೋಟುಗಳನ್ನು ಹಾಜರುಪಡಿಸಿದ್ದು, ಸದರಿ ನೋಟುಗಲು ನಂಬರ್ ಮತ್ತು ಮೌಲ್ಯವನ್ನು ಇವರು ಹೇಳಿದ ಹಾಗೆ ವೀರೇಶ್ ಕುಮಾರ್ ರವರು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಸದರಿ ನೋಟುಗಳಿಗೆ ಪೋಲಿಸ್ ಸಿಬ್ಬಂದಿಯವರು ಪೌಡರ್‌ನ್ನು ಲೇಪಿಸಿ ಇವರಿಗೆ ಕೊಟ್ಟಿದ್ದು, ಅದನ್ನು ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ಇವರ ಎರಡೂ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ.

17. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಆ.ಸ.ನೌ ರವರು ಹಣ ಕೇಳಿದರೆ ಮಾತ್ರ ಕೊಡಲು ಹೇಳಿದ್ದು, ಒಂದು ವಾಯ್ಸ್ ರೆಕಾರ್ಡ್‌ಡರ್‌ನ್ನು ಕೊಟ್ಟು ವೀರೇಶ್ ಕುಮಾರ್ ರವರನ್ನು ದೂರುದಾರರು ಜೊತೆಗೆ ಹೋಗಿ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಲು ಹೇಳಿದ್ದು, ಅಲ್ಲದೇ ದೂರುದಾರರಿಗೆ ಒಂದು ವೇಳೆ ಆ.ಸ.ನೌ ರವರು ಹಣ ಸ್ವೀಕರಿಸಿದ್ದೇ ಆದರೆ ಸೂಚನೆ ನೀಡಬೇಕೆಂದು ಹೇಳಿದ್ದರು ಅಂತಾ ನುಡಿದಿರುತ್ತಾರೆ. ಈ ಬಗ್ಗೆ ನಿ.ಪಿ.2 ರಂತೆ ಮಹಜರ್‌ನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

18. ಮುಂದುವರೆದು, ದೂರುದಾರರು ಆ.ಸ.ನೌ ರವರಿಗೆ ಫೋನ್ ಮಾಡಿದಾಗ, ಆ.ಸ.ನೌ ರವರು ತಾನು ವಾಸ ಮಾಡುವ ರೂಮ್‌ಗೆ ಬರಲು ತಿಳಿಸಿದ್ದು, ಆ ಪ್ರಕಾರ ಎಲ್ಲರೂ ಠಾಣೆಯನ್ನು ಬಿಟ್ಟು ಆ.ಸ.ನೌ ರವರ ರೂಮ್ ಹತ್ತಿರ ಬಂದಾಗ ಮಧ್ಯಾಹ್ನ 2.15 ಗಂಟೆ ಆಗಿದ್ದು, ನಂತರ ದೂರದಾರ ಹಾಗೂ ವೀರೇಶ್ ಕುಮಾರ್ ಇವರು ಆ.ಸ.ನೌ ರವರ ರೂಮಿನ ಕಡೆಗೆ ಹೋಗಿರುತ್ತಾರೆ.

ಮಧ್ಯಾಹ್ನ 3.45ರ ಸಮಯ ದೂರುದಾರರ ರೂಮಿನ ಹೊರಗಡೆ ಬಂದು ಸೂಚನೆ ನೀಡಿದ್ದು, ಇವರೆಲ್ಲರೂ ಆ.ಸ.ನೌ ರವರ ರೂಮಿನ ಕಡೆಗೆ ಹೋಗಿದ್ದು, ದೂರುದಾರರು ಆ.ಸ.ನೌ ರವರನ್ನು ತೋರಿಸಿ ಅವರಿಂದ ಹಣ ಪಡೆದು ರಿಜಿಸ್ಟರ್‌ನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ.

19. ಮುಂದುವರೆದು, ತನಿಖಾಧಿಕಾರಿಗಳು ಆ.ಸ.ನೌ ರವರನ್ನು ಪರಿಚಯಿಸಿಕೊಂಡು ಅವರನ್ನು ವಶಕ್ಕೆ ಪಡೆದು ಅವರ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಹಣದ ಬಗ್ಗೆ ವಿಚಾರಿಸಿದಾಗ ರ್‍ಯಾಕ್‌ನಲ್ಲಿ ಇಟ್ಟಿದ್ದ ನೋಟ್‌ಬುಕ್‌ನಲ್ಲಿ ಇಟ್ಟಿರುವುದಾಗಿ ಹೇಳಿದ್ದು, ಅದನ್ನು ತಂದು ಹಾಜರುಪಡಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಅದರಲ್ಲಿರುವ ಹಣವನ್ನು ತಾನು ತೆಗೆದು ಪರಿಶೀಲಿಸಿದಾಗ ಈ ಮೊದಲು ಬರೆದುಕೊಂಡಿದ್ದ ನೋಟುಗಳ ಮೌಲ್ಯ ಹಾಗೂ ನಂಬರ್‌ಗಳಿಗೆ ತಾಳೆಯಾಗಿರುತ್ತದೆ ಅಂತಾ ನುಡಿದಿರುತ್ತಾರೆ. ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಆದ ಸಂಭಾಷಣೆ ವಾಯ್ಸ್ ರೆಕಾರ್ಡ್‌ಡರ್‌ರಲ್ಲಿ ದಾಖಲಾಗಿದ್ದು, ಅಲ್ಲಿ ನಿ.ಪಿ.3 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

20. ಶಿಸ್ತು ಪ್ರಾಧಿಕಾರವು ನೆರಳು ಸಾಕ್ಷಿದಾರರಾದ ಶ್ರೀ. ವೀರೇಶ್ ಕುಮಾರ್ ಇವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ನಿ.ಪಿ.5 ರಿಂದ ನಿ.ಪಿ.9 ರವರೆಗೆ ಗುರುತುಪಡಿಸಿಕೊಂಡಿರುತ್ತಾರೆ. ನಿ.ಪಿ.5 ಒಂದು ಹಾಳೆಯ ಮೇಲೆ ನೋಟಿನ ಸಂಖ್ಯೆ ಮತ್ತು ಮೌಲ್ಯವನ್ನು ಬರೆದುಕೊಂಡಿದ್ದು ಇರುತ್ತದೆ. ನಿ.ಪಿ.6 ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ತೆಗೆದ ಛಾಯಾಚಿತ್ರಗಳು ಮತ್ತು ನಿ.ಪಿ.7 ಹಣ ಜಪ್ತಿ ಪಂಚನಾಮೆ ಕಾಲಕ್ಕೆ ತೆಗೆದ ಛಾಯಾಚಿತ್ರಗಳು; ನಿ.ಪಿ.8 ದೂರನ್ನು ಸಲ್ಲಿಸುದಕ್ಕಿಂತ ಮೊದಲು ದೂರುದಾರ ಮತ್ತು ಆ.ಸ.ನೌ ರವರ ನಡುವಿನ ಸಂಭಾಷಣೆಯ ವಿವರ ಮತ್ತು ನಿ.ಪಿ.9 ಆ.ಸ.ನೌ ರವರು ನೀಡಿದ ಸಮಜಾಯಿಷಿ ಹೇಳಿಕೆ ಆಗಿರುತ್ತದೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿ.ಡಬ್ಲ್ಯೂ.2 ಇವರಂತೆ ಟ್ರಾಪ್ ಮಾಡಲು ಹೋಗುವವರೆಗೆ ಅವರಂತೆ ಸಾಕ್ಷಿ ನುಡಿದಿರುತ್ತಾರೆ. ಮುಂದುವರೆದು, ತಾನು ದೂರುದಾರರ ಜೊತೆಗೆ ಆ.ಸ.ನೌ ರವರು ವಾಸವಿದ್ದ

ಮನೆಗೆ ಹೋಗಿದ್ದು, ಅಲ್ಲಿ ದೂರುದಾರರು 2ನೇ ಕೋಣೆಗೆ ಹೋಗಿದ್ದು, ತಾನು 1ನೇ ಕೋಣೆಯಲ್ಲಿ ನಿಂತುಕೊಂಡಿದ್ದು, ತನಗೆ ಕೇವಲ ಮಾತುಗಳು ಕೇಳಿಸುತ್ತಿತ್ತು ಮತ್ತು ದೂರುದಾರರು ಮತ್ತು ಆ.ಸ.ನೌ ರವರು ಕಾಣಿಸುತ್ತಿರಲಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು, ದೂರುದಾರರು ಆ.ಸ.ನೌ ರವರನ್ನು ತಮ್ಮ ಪಹಣಿ ಬಗ್ಗೆ ವಿಚಾರಿಸಿದಾಗ ಆ.ಸ.ನೌ ರವರು ದೂರುದಾರರಿಗೆ ಅವರ ಊರಿಗೆ ಬಂದು ಮಾಡಿಕೊಡುವುದಾಗಿ ಹೇಳಿದರು. ಆ.ಸ.ನೌ ರವರು ಹಣ ಕೇಳಿ ದೂರುದಾರರಿಗೆ ನೆಲದ ಮೇಲೆ ಇಡುವಂತೆ ಹೇಳಿದ್ದನ್ನು ತಾನು ಕೇಳಿಸಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗಳಿಗೆ ಸೂಚನೆ ಕೊಟ್ಟ ನಂತರ ಪೋಲಿಸರು ಹಾಗೂ ಇನ್ನೊಬ್ಬ ಪಂಚರಾದ ರಘುನಾಥ್ ಅಲ್ಲಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ದೂರುದಾರರು ಆ.ಸ.ನೌ ರವರನ್ನು ತೋರಿಸಿ ತನ್ನಿಂದ ಹಣ ಪಡೆದ ವ್ಯಕ್ತಿ ಇವರೇ ಇರುತ್ತಾರೆ ಅಂತಾ ತಿಳಿಸಿದ್ದು, ತನಿಖಾಧಿಕಾರಿಗಳು ಆ.ಸ.ನೌ ರವರನ್ನು ಹಿಡಿದುಕೊಂಡು ಹಣದ ಬಗ್ಗೆ ವಿಚಾರಿಸಿದಾಗ ಹಣ ಇಟ್ಟಿದ್ದ ರಿಜಿಸ್ಟರ್‌ನ್ನು ತಂದು ಹಾಜರು ಮಾಡಿದರು ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು, ದೂರುದಾರ ಮತ್ತು ಆ.ಸ.ನೌ ರವರ ನಡುವೆ ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾಗಿದ್ದ ಸಂಭಾಷಣೆ ತನಗೆ ಕೇಳಿಸಿರುವುದಿಲ್ಲವೆಂದು ಹಾಗೂ ಆ.ಸ.ನೌ ರವರ ಮನೆಯಲ್ಲಿ ದಾಖಲಾತಿಗಳನ್ನು ವಶಕ್ಕೆ ಪಡೆದಿರುವುದಿಲ್ಲವೆಂದು ನುಡಿದಿರುತ್ತಾರೆ. ಮಂಡನಾಧಿಕಾರಿಗಳು ಇವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟಿಸವಾಲು ಮಾಡಿದಾಗ, ದೂರುದಾರರು ಹಾಜರು ಮಾಡಿದ ಸಂಭಾಷಣೆಯ ದಾಖಲು ಇದ್ದ ವಾಯ್ಸ್ ರೆಕಾರ್ಡ್‌ಡರ್‌ನ್ನು ಇವರಿಗೆ ಕೇಳಿಸಿದ್ದು ಇರುವುದಿಲ್ಲ ಅಂತಾ ನುಡಿದಿರುತ್ತಾರೆ. ಟ್ರಾಪ್ ಕಾಲದಲ್ಲಿ ಆ.ಸ.ನೌ ಮತ್ತು ದೂರುದಾರರ ನಡುವೆ ಸಂಭಾಷಣೆ ಆಗಿದ್ದ ವಾಯ್ಸ್ ರೆಕಾರ್ಡ್‌ನ್ನು ಇವರಿಗೆ ಕೇಳಿಸಿ, ನಿ.ಪಿ.8 ರಂತೆ ಲಿಪಿಕರಿಸಿರುತ್ತಾರೆ ಅಂತಾ ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ವಾಯ್ಸ್ ರೆಕಾರ್ಡ್‌ಡರ್‌ನಲ್ಲಿ ದಾಖಲಾಗಿದ್ದ ಆ.ಸ.ನೌ ರವರ ಧ್ವನಿಯನ್ನು ಗ್ರಾಮ ಲೆಕ್ಕಾಧಿಕಾರಿ ಶ್ರೀ. ಸುನಿಲ್ ಇವರ ಸಮಕ್ಷಮ ಗುರುತಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ ಅಂತಾ ನುಡಿದಿರುತ್ತಾರೆ.

ನಿ.ಪಿ.8ನ್ನು ಪರಿಶೀಲಿಸಿದಾಗ ಸದರಿ ಸಂಭಾಷಣೆಯು ದೂರುದಾರ ಮತ್ತು ಆ.ಸ.ನೌ ರವರ ನಡುವೆ ಪ್ರಾಯೋಗಿಕ ಪಂಚನಾಮೆಯಲ್ಲಿ ನಡೆದ ಸಂಭಾಷಣೆ ಇದ್ದು, ಆದರೆ ಟ್ರಾಪ್ ವೇಳೆಯಲ್ಲಿ ನಡೆದ ಸಂಭಾಷಣೆ ಆಗಿರುವುದಿಲ್ಲ.

21. ತನಿಖಾಧಿಕಾರಿಗಳಾದ ಶ್ರೀ. ಬಷೀರುದ್ದೀನ್ ರವರು ಪಿ.ಡಬ್ಲ್ಯೂ.4 ಎಂದು ಸಾಕ್ಷಿ ನುಡಿದಿದ್ದು, ನಿ.ಪಿ.10 ರಿಂದ ನಿ.ಪಿ.17 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ನಿ.ಪಿ.10 ಎಫ್.ಐ.ಆರ್; ನಿ.ಪಿ.11 ಸ್ಥಳದ ನಕ್ಷೆ; ನಿ.ಪಿ.12 ಛಾಯಾಚಿತ್ರಗಳು; ನಿ.ಪಿ.13 ಲೋಕೋಪಯೋಗಿ ಇಂಜಿನಿಯರ್ ರವರು ನೀಡಿದ ಸ್ಥಳದ ನಕ್ಷೆ; ನಿ.ಪಿ.14 ರಸಾಯನಿಕ ವರದಿ; ನಿ.ಪಿ.15 ಆ.ಸ.ನೌ ರವರ ಸೇವಾ ವಿವರ; ನಿ.ಪಿ.16 ಆ.ಸ.ನೌ ರವರ ಹಾಜರಾತಿ ಪ್ರಮಾಣ ಪತ್ರ ಮತ್ತು ನಿ.ಪಿ.17 ಅಭಿಯೋಜನಾ ಮಂಜೂರಾತಿ ಇರುತ್ತದೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು ದಿನಾಂಕ: 21/05/2013 ರಂದು ಠಾಣೆಗೆ ಹಾಜರಾಗಿ, ಆ.ಸ.ನೌ ರವರು ಲಂಚದ ಹಣದ ಬೇಡಿಕೆ ಇಟ್ಟಿರುತ್ತಾರೆ ಅಂತಾ ಹೇಳಿದ್ದು, ಅದಕ್ಕೆ ದೂರುದಾರರಿಗೆ ಡಿಜಿಟಲ್ ವಾಯ್ಸ್ ರೆಕಾರ್ಡ್‌ಡರ್‌ನ್ನು ನೀಡಿದ್ದು, ಅದರಲ್ಲಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡು ಬರಲು ಹೇಳಿದ್ದು, ಆ ಪ್ರಕಾರ ಮೇಲೆ ದೂರಿನಲ್ಲಿ ಹೇಳಿದ ಹಾಗೆ ಸಂಭಾಷಣೆಯನ್ನು ದಾಖಲು ಮಾಡಿಕೊಂಡು ಬಂದು ದೂರನ್ನು ಸಲ್ಲಿಸಿರುತ್ತಾರೆ. ನಂತರ ಸದರಿ ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲು ಮಾಡಿಕೊಂಡು, ಇಬ್ಬರು ಪಂಚರನ್ನು ಬರಮಾಡಿಕೊಂಡು ಅವರನ್ನು ದೂರುದಾರರಿಗೆ ಪರಿಚಯಿಸಿ ದೂರಿನಲ್ಲಿ ಬರೆದ ವಿಷಯವನ್ನು ತಿಳಿಸಿರುತ್ತಾರೆ.

22. ದೂರುದಾರರು ಅಲ್ಲಿ ವಾಯ್ಸ್ ರೆಕಾರ್ಡ್‌ಡರ್‌ನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಸಂಭಾಷಣೆಯನ್ನು ಕೇಳಿಸಿರುತ್ತಾರೆ. ದೂರುದಾರರು ರೂ.1000/- ಮುಖಬೆಲೆಯ 13 ನೋಟುಗಳನ್ನು ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರ್ ಮತ್ತು ಮೌಲ್ಯವನ್ನು ರಘುನಾಥ್ ಇವರು ಹೇಳಿದ ಹಾಗೆ ವೀರೇಶ್ ಕುಮಾರ್ ರವರು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಸದರಿ ನೋಟುಗಳಿಗೆ ತನ್ನ ಸಿಬ್ಬಂದಿಯವರು ಪೌಡರ್‌ನ್ನು

8

ಲೇಪಿಸಿ ರಘುನಾಥ್ ಇವರಿಗೆ ಕೊಟ್ಟಿದ್ದು, ಅದನ್ನು ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ರಘುನಾಥ್ ರವರ ಎರಡೂ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ.

23. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಆ.ಸ.ನೌ ರವರು ಹಣ ಕೇಳಿದರೆ ಮಾತ್ರ ಕೊಡಲು ಹೇಳಿದ್ದು, ಒಂದು ವಾಯ್ಸ್ ರೆಕಾರ್ಡ್‌ಡರ್‌ನ್ನು ಕೊಟ್ಟು ವೀರೇಶ್ ಕುಮಾರ್ ರವರನ್ನು ದೂರುದಾರರು ಜೊತೆಗೆ ಹೋಗಿ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಲು ಹೇಳಿದ್ದು, ಅಲ್ಲದೇ ದೂರುದಾರರಿಗೆ ಒಂದು ವೇಳೆ ಆ.ಸ.ನೌ ರವರು ಹಣ ಸ್ವೀಕರಿಸಿದ್ದೇ ಆದರೆ ಸೂಚನೆ ನೀಡಬೇಕೆಂದು ಹೇಳಿದ್ದರು ಅಂತಾ ನುಡಿದಿರುತ್ತಾರೆ. ಈ ಬಗ್ಗೆ ನಿ.ಪಿ.2 ರಂತೆ ಮಹಜರ್‌ನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

24. ಮುಂದುವರೆದು, ದೂರುದಾರರು ಆ.ಸ.ನೌ ರವರಿಗೆ ಫೋನ್ ಮಾಡಿದಾಗ, ಆ.ಸ.ನೌ ರವರು ತಾನು ವಾಸ ಮಾಡುವ ರೂಮ್‌ಗೆ ಬರಲು ತಿಳಿಸಿದ್ದು, ಆ ಪ್ರಕಾರ ಎಲ್ಲರೂ ಠಾಣೆಯನ್ನು ಬಿಟ್ಟು ಆ.ಸ.ನೌ ರವರ ರೂಮ್ ಹತ್ತಿರ ಬಂದಾಗ ಮಧ್ಯಾಹ್ನ 2.15 ಗಂಟೆ ಆಗಿದ್ದು, ನಂತರ ದೂರದಾರ ಹಾಗೂ ವೀರೇಶ್ ಕುಮಾರ್ ಇವರು ಆ.ಸ.ನೌ ರವರ ರೂಮಿನ ಕಡೆಗೆ ಹೋಗಿರುತ್ತಾರೆ. ಮಧ್ಯಾಹ್ನ 3.45ರ ಸಮಯ ದೂರುದಾರರ ರೂಮಿನ ಹೊರಗಡೆ ಬಂದು ಸೂಚನೆ ನೀಡಿದ್ದು, ಇವರೆಲ್ಲರೂ ಆ.ಸ.ನೌ ರವರ ರೂಮಿನ ಕಡೆಗೆ ಹೋಗಿದ್ದು, ದೂರುದಾರರು ಆ.ಸ.ನೌ ರವರನ್ನು ತೋರಿಸಿ ಅವರಿಂದ ಹಣ ಪಡೆದು ರಿಜಿಸ್ಟರ್‌ನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ.

25. ಮುಂದುವರೆದು, ತನಿಖಾಧಿಕಾರಿಗಳು ಆ.ಸ.ನೌ ರವರನ್ನು ಪರಿಚಯಿಸಿಕೊಂಡು ಅವರನ್ನು ವಶಕ್ಕೆ ಪಡೆದು ಅವರ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಹಣದ ಬಗ್ಗೆ ವಿಚಾರಿಸಿದಾಗ ರ್‍ಯಾಕ್‌ನಲ್ಲಿ ಇಟ್ಟಿದ್ದ ನೋಟ್‌ಬುಕ್‌ನಲ್ಲಿ ಇಟ್ಟಿರುವುದಾಗಿ ಹೇಳಿದ್ದು, ಅದನ್ನು ತಂದು

ಹಾಜರುಪಡಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಅದರಲ್ಲಿರುವ ಹಣವನ್ನು ರಘುನಾಥ್ ಇವರು ತೆಗೆದು ಪರಿಶೀಲಿಸಿದಾಗ ಈ ಮೊದಲು ಬರೆದುಕೊಂಡಿದ್ದ ನೋಟುಗಳ ಮೌಲ್ಯ ಹಾಗೂ ನಂಬರ್‌ಗಳಿಗೆ ತಾಳೆಯಾಗಿರುತ್ತದೆ ಅಂತಾ ನುಡಿದಿರುತ್ತಾರೆ. ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಆದ ಸಂಭಾಷಣೆ ವಾಯ್ಸ್ ರೆಕಾರ್ಡ್‌ಡರ್‌ರಲ್ಲಿ ದಾಖಲಾಗಿದ್ದು, ಅಲ್ಲಿ ನಿ.ಪಿ.3 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

26.ನಂತರ ವಾಯ್ಸ್ ರೆಕಾರ್ಡ್‌ಡರ್‌ನಲ್ಲಿದ್ದ ಸಂಭಾಷಣೆಯನ್ನು ಅಲ್ಲಿದ್ದ ಗ್ರಾಮಲೆಕ್ಕಿಗ ಸುನಿಲ್ ರವರಿಗೆ ಕೇಳಿಸಿದ್ದು, ಅವರು ಆ.ಸ.ನೌ ರವರ ಧ್ವನಿಯನ್ನು ಗುರುತಿಸಿರುತ್ತಾರೆ. ನಂತರ ವಾಯ್ಸ್ ರೆಕಾರ್ಡ್‌ಡರ್‌ನಲ್ಲಿದ್ದ ಸಂಭಾಷಣೆಯನ್ನು ಲಾಪ್‌ಟಾಪ್ ಮೂಲಕ ವರ್ಗಾಯಿಸಿಕೊಂಡಿರುತ್ತಾರೆ. ಆ.ಸ.ನೌ ರವರು ನಿ.ಪಿ.9ರ ಪ್ರಕಾರ ತಮ್ಮ ಸಮಜಾಯಿಷಿಯನ್ನು ಬರೆದು ಕೊಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ಸ್ಥಳದಲ್ಲಿ ನಕ್ಷೆಯನ್ನು ತೆಗೆದಿದ್ದು, ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ಪಿ.ಡಬ್ಲ್ಯೂಡಿ ಇಲಾಖೆಯಿಂದ ನಕ್ಷೆಯನ್ನು ತಯಾರಿಸಿ ಕೊಟ್ಟಿದ್ದು, ಅದನ್ನು ಪಡೆದುಕೊಂಡಿದ್ದು, ರಾಸಾಯನಿಕ ವರದಿ ಹಾಗೂ ಆ.ಸ.ನೌ ರವರ ಹಾಜರಾತಿ ಬಗ್ಗೆ ಪ್ರಮಾಣ ಪತ್ರ ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದುಕೊಂಡು ದೋಷಾರೋಪನಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ.

27.ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 2013ನೇ ಸಾಲಿನ ಮೇ ತಿಂಗಳಲ್ಲಿ ತಹಶೀಲ್ದಾರ್ ಕಛೇರಿ ಯಾದಗಿರಿ ಹೊರೂಂಚ ಗ್ರಾಮದ ಸರ್ವೆ ನಂ.111, 112 ಮತ್ತು 174ರ ಪಟ್ಟೆದಾರರಾದ ಚಂದ್ರಾಮ್ ತಂದೆ ಸಾಬಣ್ಣ ಇವರು ಮೃತಪಟ್ಟಿದ್ದು, ಮೃತರ ವಾರಸುದಾರರ ಹೆಸರಿಗೆ ಪೌತಿ ಬದಲಾವಣೆಗಾಗಿ 3 ಕಡತಗಳು ದಿನಾಂಕ: 18/04/2013 ರಂದು ಬಂದಿದ್ದು, ಆ ಪ್ರಕಾರ ತಾನು ಸದರಿ ಗ್ರಾಮಕ್ಕೆ ಭೇಟಿ ನೀಡಿ ಸದರಿ ವಾರಸುದಾರರಿಗೆ ವರ್ಗಾವಣೆ ಬಗ್ಗೆ ಯಾರದ್ದಾದರೂ ಆಕ್ಷೇಪಣೆಗಳು ಅಥವಾ ತಕರಾರುಗಳು

ಇದ್ದಲ್ಲಿ 30 ದಿನಗಳೊಳಗಾಗಿ ತಿಳಿಸಬೇಕೆಂದು ನೋಟಿಸ್ ಜಾರಿ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ.

28. ಮುಂದುವರೆದು, ಕಡತಗಳು ಇನ್ನು ವಿಚಾರಣೆ ಹಂತದಲ್ಲಿರುವಾಗಲೇ ಸರ್ವೆ ನಂ.174ರ ಪಟ್ಟೆದಾರರಾದ ಚಂದ್ರಾಮ್ ತಂದೆ ಸಾಬಣ್ಣ ಇನ್ನು ಜೀವಂತ ಇರುವುದು ಹಾಗು ಅರ್ಜಿದಾರರಿಗೆ ಹಾಗೂ ಸದರಿ ಜೀವಂತ ಪಟ್ಟೆದಾರರಿಗೆ ಯಾವುದೇ ರೀತಿಯಿಂದ ಸಂಬಂಧವಿಲ್ಲವೆಂದು ವಿಚಾರಣೆಯಿಂದ ತಿಳಿದುಬಂದಿದ್ದು, ಇದರಿಂದಾಗಿ ಅರ್ಜಿದಾರರ ಅಳಿಯ ಅವರ ಮಾವನ ಹೆಸರನ್ನೇ ಹೋಲುವ ಸರ್ವೆ ನಂ.174ರ ಕ್ಷೇತ್ರ 3 ಎಕರೆ 10 ಗುಂಟೆ ಜಮೀನನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳುವ ಹುನ್ನಾರದಿಂದ ಇನ್ನು ಜೀವಂತವಿರುವ ಪಟ್ಟೆದಾರರನ್ನು ಮೃತ ಹೊಂದಿದ್ದಾರೆಂದು ಹಾಗೂ ಪಟ್ಟೆದಾರರಿಗೂ ಅರ್ಜಿದಾರರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಅವರ ವಾರಸುದಾರರೆಂದು ಅರ್ಜಿ ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಇದರಿಂದಾಗೂ ತಾನು ವಾರಸುದಾರರ ವರ್ಗಾವಣೆಯ ಕಡತವನ್ನು ತಿರಸ್ಕರಿಸಿ ದಿನಾಂಕ: 18/05/2013 ರಂದು ಕಂದಾಯ ನಿರೀಕ್ಷಕರಿಗೆ ಶಿಫಾರಸ್ಸು ಮಾಡಿರುತ್ತೇನೆ ಅಂತಾ ಹೇಳಿರುತ್ತಾರೆ. ಮುಂದುವರೆದು, ಉಳಿದ ಸರ್ವೆ ನಂ.111 ಮತ್ತು 112ರ ಕಡತಗಳನ್ನು ಮಂಜೂರಿಗಾಗಿ ದಿನಾಂಕ: 18/05/2013 ರಂದು ಕಂದಾಯ ನಿರೀಕ್ಷಕರಿಗೆ ವರದಿಯನ್ನು ಸಲ್ಲಿಸಿದ್ದರಿಂದ ಅರ್ಜಿದಾರರ ಕೆಲಸವು ತನ್ನ ಬಳಿಯಲ್ಲಿ ಬಾಕಿ ಇರುವುದಿಲ್ಲವೆಂದು ನುಡಿದಿರುತ್ತಾರೆ. ದಿನಾಂಕ: 21/05/2013 ರಂದು ಇವರ ಕಾರ್ಯಾಲಯಕ್ಕೆ ಅರ್ಜಿದಾರರು ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ ಇವರು ಜೀವಂತವಿರುವ ವ್ಯಕ್ತಿಯನ್ನು ಮೃತಪಟ್ಟಿದ್ದಾರೆಂದು ದೃಢೀಕರಿಸಿ ಮತ್ತು ಪಟ್ಟೇದಾರರಿಗೆ ದೂರುದಾರರಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಕೂಡ ವಾರಸುದಾರರೆಂದು ಅರ್ಜಿ ಸಲ್ಲಿಸಿದ್ದು ಕಾನೂನು ಬಾಹಿರವಾಗಿರುತ್ತದೆ ಅಂತಾ ತಿಳಿಸಿದ್ದರಿಂದ ದೂರುದಾರರು ಇವರೊಂದಿಗೆ ವಾದ ವಿವಾದ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಮುಂದುವರೆದು, ದಿನಾಂಕ: 23/05/2013 ರಂದು ಮಧ್ಯಾಹ್ನ 3 ಗಂಟೆ ಸುಮಾರಿಗೆ ಇವರ ಕಾರ್ಯಾಲಯಕ್ಕೆ ಬಂದ ಅರ್ಜಿದಾರರು ಕುಡಿಯಲು ನೀರು ಬೇಕು ಎಂದು ಕೇಳಿದಾಗ ತಾನು ನೀರು ಒಳಗಡೆ ಇದೆ

6

ಹೋಗಿ ಕುಡಿದು ಬನ್ನಿ ಎಂದು ಹೇಳಿದ್ದು, ನಂತರ ಅವರು ನೀರು ಕುಡಿದು ಹೊರ ಬಂದ ಸ್ವಲ್ಪ ಸಮಯದ ನಂತರ 4-5 ಜನರು ಬಂದು ಪರಿಚಯಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ.

29.ಮುಂದುವರೆದು ದೂರುದಾರರ ಹೇಳಿಕೆಯ ಮೇರೆಗೆ ನೀರು ಇಟ್ಟಿರುವ ಕಡೆ ಇದ್ದ ಕಡತದಿಂದ ಹಣವನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಲೋಕಾಯುಕ್ತ ಪೋಲಿಸರು ತನ್ನಿಂದ ಹಲವಾರು ದಾಖಲಾತಿಗಳಿಗೆ ಸಹಿ ಪಡೆದು ತನ್ನ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ತಾನು ದೂರುದಾರರಿಗೆ ಲಂಚದ ಹಣದ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಪಡೆದಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಸದರಿಯವರು ನಿ.ಡಿ.1 ರಿಂದ ನಿ.ಡಿ.4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಡಿ.1 ಮತ್ತು ನಿ.ಡಿ.2 ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮ್ಯುಟೇಷನ್ ನಂ.21 ಮತ್ತು 30 ರ ನಕಲು ಪ್ರತಿ; ನಿ.ಡಿ.3 ಮತ್ತು ನಿ.ಡಿ.4 ಮ್ಯುಟೇಷನ್ ರಿಜಿಸ್ಟರ್ ನಂ.30 ಮತ್ತು 57ರ ನಕಲು ಪ್ರತಿಗಳು ಆಗಿರುತ್ತದೆ.

30.ಈ ವಿಚಾರಣೆಯಲ್ಲಿ ಈಗಾಗಲೇ ಮೇಲೆ ಹೇಳಿದ ಹಾಗೆ ದೂರುದಾರರು ಪ್ರತಿಕೂಲ ಸಾಕ್ಷಿ ಎಂದು ಸಾಕ್ಷಿ ನುಡಿದಿರುತ್ತಾರೆ. ಪಿ.ಡಬ್ಲ್ಯೂ.3 ಇವರು ನೆರಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ ನಂ.4ರಲ್ಲಿ ತಾನು ಹಾಗೂ ದೂರುದಾರರು ಆ.ಸ.ನೌ ರವರ ಮನೆ ಹತ್ತಿರ ಹೋಗಿದ್ದು, ದೂರುದಾರರು ಆ.ಸ.ನೌ ರವರು ವಾಸವಿದ್ದ ಮನೆಯ ಎರಡನೆಯ ಕೋಣೆಗೆ ಹೋಗಿದ್ದು, ತಾನು ಒಂದನೇ ಕೋಣೆಯಲ್ಲಿ ನಿಂತುಕೊಂಡಿದ್ದು, ಆ.ಸ.ನೌ ಮತ್ತು ದೂರುದಾರರ ನಡುವೆ ಆದ ಮಾತುಗಳು ಕೇಳಿಸುತ್ತಿದ್ದು, ಆದರೆ ದೂರುದಾರರು ಮತ್ತು ಆ.ಸ.ನೌ ರವರು ಕಾಣಿಸುತ್ತಿರಲಿಲ್ಲ ಅಂತಾ ನುಡಿದಿರುತ್ತಾರೆ. ಅದರಂತೆ ಪ್ಯಾರಾ ನಂ.6ರಲ್ಲಿ ದೂರುದಾರ ಮತ್ತು ಆ.ಸ.ನೌ ರವರ ನಡುವೆ ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾಗಿದ್ದ ಸಂಭಾಷಣೆಯು ತನಗೆ ಕೇಳಿಸಲಿಲ್ಲ ಅಂತಾ ನುಡಿದಿರುತ್ತಾರೆ ಹಾಗೂ ಆ.ಸ.ನೌ ರವರ ಮನೆಯಲ್ಲಿ ದಾಖಲಾತಿಗಳನ್ನು ವಶಕ್ಕೆ ಪಡೆದಿರುವುದಿಲ್ಲ ಅಂತಾ ನುಡಿದಿರುತ್ತಾರೆ.

31. ಪಿ.ಡಬ್ಲ್ಯೂ.3 ಇವರು ತಮ್ಮ ಪಾಟಿ ಸವಾಲಿನಲ್ಲಿ ತಾನು ಠಾಣೆಗೆ ಹೋದಾಗ ರೂ.1000/- ಮುಖಬೆಲೆಯ 13 ನೋಟುಗಳನ್ನು ಯಾರು ಹಾಜರುಪಡಿಸಿರುತ್ತಾರೆ ಅಂತಾ ತನಗೆ ನೆನಪಿರುವುದಿಲ್ಲವೆಂದು ಹಾಗೂ ಸದರಿ ನೋಟುಗಳನ್ನು ತಾನು ನೋಡಿರುವುದಿಲ್ಲವೆಂದು ನುಡಿದಿರುತ್ತಾರೆ. ಅದರಂತೆ ಸಾಕ್ಷಿ ರಘುನಾಥ ರವರಿಂದ ನೋಟುಗಳಿಗೆ ಪೌಡರ್ ಲೇಪಿಸಿ ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಟ್ಟ ಬಗ್ಗೆ ಆಗಲೀ ಅಥವಾ ರಘುನಾಥ ಇವರ ಕೈಗಳನ್ನು ದ್ರಾವಣದಲ್ಲಿ ತೊಳೆಸಿದ್ದ ಬಗ್ಗೆ ತಾನು ನೋಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು, ಆ.ಸ.ನೌ ರವರ ಮನೆಯಲ್ಲಿ ಟ್ರಾಪ್ ವೇಳೆಯಲ್ಲಿ ಆದ ವಿದ್ಯಾಮಾನಗಳ ಬಗ್ಗೆ ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ.

32. ಈ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಆ.ಸ.ನೌ ರವರ ಕೇವಲ ಸೇವಾ ವಿವರವನ್ನು ಮಾತ್ರ ಹಾಜರುಪಡಿಸಿದ್ದು, ಆದರೆ ದೂರುದಾರರಿಗೆ ಸಂಬಂಧಪಟ್ಟಂತೆ ಕೆಲಸ ಬಾಕಿ ಇದ್ದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

33. ಆ.ಸ.ನೌ ರವರು ದೂರುದಾರರ ಅರ್ಜಿಗೆ ಸಂಬಂಧಪಟ್ಟಂತೆ 2 ಮ್ಯುಟೇಷನ್‌ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ.1 ಮತ್ತು 2 ಅಂತಾ ಗುರುತಿಸಲಾಗಿದ್ದು, ನಿ.ಡಿ.1ರ ಪ್ರಕಾರ ಒಬ್ಬ ಸಾಬಣ್ಣ ತಂದೆ ಚಂದ್ರಾಮ್ ಈತನು ದಿನಾಂಕ: 22/03/2013 ರಂದು ಮ್ಯುಟೇಷನ್‌ಗಾಗಿ ಸರ್ವೆ ನಂ.111ರ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ ಸದರಿ ಜಮೀನಿನ ಪಟ್ಟೆದಾರರಾದ ಚಂದ್ರಾಮ್ ಇವರು ಮೃತಪಟ್ಟಿದ್ದು, ತಾನು ಅವರ ಮಗನಾಗಿದ್ದು, ತನ್ನ ಹೆಸರಿನಲ್ಲಿ ಮ್ಯುಟೇಷನ್ ಮಾಡಲು ಕೇಳಿಕೊಂಡಿದ್ದು, ಅದರಂತೆ ಸದರಿ ನೋಟಿಸ್‌ಗೆ 30 ದಿನಗಳ ಅವಧಿಯಲ್ಲಿ ಯಾವುದೇ ತಕರಾರು ಬಾರದ ಕಾರಣ ಮುಂದಿನ ಆದೇಶಕ್ಕಾಗಿ ರಾಜಸ್ವ ನಿರೀಕ್ಷಕರಿಗೆ ಸಲ್ಲಿಸಿದ್ದು ಇರುತ್ತದೆ ಅಂತಾ ಆ.ಸ.ನೌ ರವರು ದಿನಾಂಕ: 19/04/2013 ರಂದು ಷರಾ ಬರೆದು ಕೊಟ್ಟಿರುತ್ತಾರೆ ಅಂತಾ ಕಂಡುಬರುತ್ತದೆ. ಅದರಂತೆ ಇನ್ನೊಂದು ಮ್ಯುಟೇಷನ್‌ನ್ನು ಪರಿಶೀಲಿಸಿದಾಗ ಸರ್ವೆ ನಂ.112/ಅ, 112/ಆ ಹಾಗೂ 112/ಇ ಜಮೀನಿಗೆ ಸಂಬಂಧಪಟ್ಟಂತೆ ಮೃತ ಚಂದ್ರಾಮ್ ಈತನ

ವಾರಸುದಾರರು ಅಂದರೆ ಆತನ ಮಕ್ಕಳು ಹಾಗೂ ಹೆಂಡತಿ ಇವರು ಮ್ಯುಟೇಷನ್ ಮಾಡಿಕೊಡಲು ಅರ್ಜಿಯನ್ನು ದಿನಾಂಕ: 18/03/2013 ರಂದು ಸಲ್ಲಿಸಿದ್ದು, ಅದರಲ್ಲಿಯೂ ಸಹ 30 ದಿನಗಳ ಅವಧಿಯಲ್ಲಿ ಯಾವುದೇ ತಕರಾರು ಬಾರದ ಕಾರಣ ಮುಂದಿನ ಆದೇಶಕ್ಕಾಗಿ ರಾಜಸ್ವ ನಿರೀಕ್ಷಕರಿಗೆ ಸಲ್ಲಿಸಿದ್ದು ಇರುತ್ತದೆ ಅಂತಾ ಆ.ಸ.ನೌ ರವರು ದಿನಾಂಕ: 19/04/2013 ರಂದು ಷರಾ ಬರೆದು ಕೊಟ್ಟಿರುತ್ತಾರೆ ಅಂತಾ ಕಂಡುಬರುತ್ತದೆ. ನಿ.ಡಿ.2ನ್ನು ಪರಿಶೀಲಿಸಿದಾಗ ಚಂದ್ರಾಮ್‌ನ ಮಗನಾದ ದೇವಪ್ಪ ಈತನು ಸರ್ವೆ ನಂ.174/ಅ 3 ಎಕರೆ 10 ಗುಂಟೆ ಹಾಗೂ ಸರ್ವೆ ನಂ.211/2 0.19 ಗುಂಟೆ ಈ ಜಮೀನಿಗೆ ಸಂಬಂಧಪಟ್ಟಂತೆ ದಿನಾಂಕ: 22/03/2013 ರಂದು ತನ್ನ ಹೆಸರಿನಲ್ಲಿ ಮ್ಯುಟೇಷನ್ ಮಾಡಲು ಕೇಳಿಕೊಂಡಿದ್ದು, ಸದರಿ ಅರ್ಜಿಯ ಬಗ್ಗೆ ಸ್ಥಾನಿಕ ಪರಿಶೀಲನೆ ಮಾಡಲಾಗಿ ಮೃತರ ವಾರಸುದಾರರು ಸಂಶಯಾಸ್ಪದವಾಗಿರುವುದರಿಂದ ತಿರಸ್ಕರಿಸಿ ಮುಂದಿನ ಆದೇಶಕ್ಕಾಗಿ ಆ.ಸ.ನೌ ರವರು ದಿನಾಂಕ: 19/04/2013 ರಂದು ಷರಾ ಬರೆದು ರಾಜಸ್ವ ನಿರೀಕ್ಷಕರಿಗೆ ಸಲ್ಲಿಸಿದ್ದು, ರಾಜಸ್ವ ನಿರೀಕ್ಷಕರು ನಿ.ಡಿ.3ರ ಪ್ರಕಾರ ಸದರಿ ಮ್ಯುಟೇಷನ್‌ನ್ನು ದಿನಾಂಕ: 25/05/2013 ರಂದು ತಿರಸ್ಕರಿಸಿರುತ್ತಾರೆ ಅಂತಾ ಕಂಡುಬರುತ್ತದೆ.

34. ಆ.ಸ.ನೌ ರವರ ಪ್ರಕಾರ ಚಂದ್ರಾಮ್‌ನ ಮಗನಾದ ದೇವಪ್ಪ ಈತನು ಸರ್ವೆ ನಂ.174/ಅ ಇದಕ್ಕೆ ತಾನು ಚಂದ್ರಾಮ್‌ನ ಮಗನೆಂದು ಹೇಳಿ, ತನ್ನ ಹೆಸರಿನಲ್ಲಿ ಮ್ಯುಟೇಷನ್ ಮಾಡಿಕೊಳ್ಳಲು ಕೇಳಿದ್ದು ಇದ್ದು ಆದರೆ ತನಿಖಾ ವೇಳೆಯಲ್ಲಿ ಸರ್ವೆ ನಂ.174ರಲ್ಲಿ ಇದ್ದ ಪಟ್ಟೆದಾರ ಬೇರೆ ವ್ಯಕ್ತಿ ಇರುವುದರಿಂದ ಸದರಿ ಮ್ಯುಟೇಷನ್‌ನ್ನು ತಿರಸ್ಕರಿಸಿದ್ದು ಇರುತ್ತದೆ ಅಂತಾ ನುಡಿದಿರುತ್ತಾರೆ. ಸರ್ವೆ ನಂ.174/2, 174/4 ಇದಕ್ಕೆ ಸಂಬಂಧಪಟ್ಟಂತೆ ಒಂದು ಮ್ಯುಟೇಷನ್‌ನ್ನು ಹಾಜರುಪಡಿಸಿದ್ದು (ನಿ.ಡಿ.4) ಆ.ಸ.ನೌ ರವರ ಪ್ರಕಾರ ಸದರಿ ಚಂದ್ರಾಮ್ ತಂದೆ ಸಾಬಣ್ಣ ಸದರಿ ಜಮೀನಿನ ಪಟ್ಟೆದಾರರು ಜೀವಂತವಿದ್ದು, ಅವರು ಈ ಜಮೀನುಗಳನ್ನು 2015–16ನೇ ಸಾಲಿನಲ್ಲಿ ಬೇರೆಯವರಿಗೆ ಕ್ರಯ ಮಾಡಿದ್ದು, ಅದರಂತೆ ಮ್ಯುಟೇಷನ್ ಆಗಿರುತ್ತದೆ ಅಂತಾ ಹೇಳಿದ್ದು ಇರುತ್ತದೆ. ಆದರೆ ಆ.ಸ.ನೌ ಇವರು ಈ ವಿಷಯದ ಬಗ್ಗೆ ಪಿ.ಡಬ್ಲ್ಯೂ.1 ಇವರಿಗೆ ಪಾಟಿಸವಾಲು ಮಾಡಿರುವುದಿಲ್ಲ. ಆ.ಸ.ನೌ ರವರು ಸರ್ವೆ ನಂ.174/2 ಮತ್ತು 174/4 ರಲ್ಲಿ ಇರುವ ಚಂದ್ರಾಮ್

ಈತನು ಹಾಗೂ ಸರ್ವೆ ನಂ.111, 112 ಇದರ ಪಟ್ಟೆದಾರರಾದ ಚಂದ್ರಾಮ್ ರವರು ಬೇರೆ ಬೇರೆ ಆಗಿರುತ್ತಾರೆ ಎಂಬುದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಇವರ ಸಾಕ್ಷಿಯು ಮೃತಪಟ್ಟ ಚಂದ್ರಾಮ್ ಮತ್ತು ಸರ್ವೆ ನಂ.174ರ ಪಟ್ಟೆದಾರ ಚಂದ್ರಾಮ್ ಬೇರೆ ಆಗಿದ್ದು, ದೂರುದಾರರು ಮತ್ತು ಆತನು ಅಳಿಯ ಇವರು ಸೇರಿಕೊಂಡು ಮೃತಪಟ್ಟ ಚಂದ್ರಾಮ್ ಈತನು ಒಬ್ಬನೇ ವ್ಯಕ್ತಿ ಇರುತ್ತಾರೆ ಅಂತಾ ತೋರಿಸಿ ಮ್ಯುಟೇಷನ್ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾರೆ ಅಂತಾ ಸಂಪೂರ್ಣ ದಾಖಲಾತಿಗಳನ್ನು ಹಾಜರುಪಡಿಸದ ಕಾರಣ ಅಂದರೆ ಚಂದ್ರಾಮ್ ಇವರು ಸರ್ವೆ ನಂ.174/2 ಮತ್ತು 174/4 ಇದನ್ನು ಕ್ರಯಾ ಮಾಡಿದ ಬಗ್ಗೆ, ಕ್ರಯಾ ಪತ್ರವನ್ನು ಹಾಜರುಪಡಿಸದ ಕಾರಣ ನನ್ನ ಅಭಿಪ್ರಾಯದಲ್ಲಿ ಸಾಬೀತು ಆಗಿರುವುದಿಲ್ಲ.

35. ಆದರೆ ಈ ಪ್ರಕರಣದಲ್ಲಿ ದೂರನ್ನು ಕೊಟ್ಟ ವ್ಯಕ್ತಿಯೇ ತನ್ನ ದೂರಿನ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಮತ್ತು ತಾನು ಆ.ಸ.ನೌ ರವರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ಬೇಡಿಕೆ ಇಟ್ಟಿರುವುದಿಲ್ಲ ಅಂತಾ ನುಡಿದಿದ್ದು, ಅಲ್ಲದೇ ನೆರಳು ಸಾಕ್ಷಿದಾರರು ಸಹ ಪಾಟಿಸವಾಲಿನಲ್ಲಿ ಆ.ಸ.ನೌ ಮತ್ತು ದೂರುದಾರರ ನಡುವೆ ಆದ ವಿದ್ಯಾಮಾನಗಳ ಬಗ್ಗೆ ತನಗೆ ಗೊತ್ತಿಲ್ಲವೆಂದು ನುಡಿದಿದ್ದು ಅಲ್ಲದೇ ಟ್ರಾಪ್ ವೇಳೆಯಲ್ಲಿ ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಆದ ಮಾತುಕತೆಗಳು ತನಗೆ ಕೇಳಿಸುತ್ತಿರಲಿಲ್ಲವೆಂದು ನುಡಿದಿದ್ದು ಇರುತ್ತದೆ. ಪಿ.ಡಬ್ಲ್ಯೂ.3 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೇಲೆ ಹೇಳಿದ ಹಾಗೆ ತನ್ನ ಪಾಟಿಸವಾಲಿನಲ್ಲಿ ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಆದ್ದರಿಂದ, ಹಣ ಬೇಡಿಕೆ ಇಟ್ಟ ಬಗ್ಗೆ ಮತ್ತು ಪಡೆದುಕೊಂಡ ಬಗ್ಗೆ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ರುಜುವಾತುಪಡಿಸಿರುವುದಿಲ್ಲ. ನನ್ನ ಅಭಿಪ್ರಾಯಲ್ಲಿ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಅಂಶ–1ನ್ನು ಸಾಬೀತುಪಡಿಸಿರುವುದಿಲ್ಲ.

36. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

37. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಸಂಗಮೇಶ @ ಸಂಗನಬಸವ,** ಗ್ರಾಮ ಲೆಕ್ಕಿಗರು, ಯಡ್ಡಳ್ಳಿ ಗ್ರಾಮ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/12/2050 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

9/6/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Kashappa S/o Basanthappa, Anur (K). |
| | **PW-2** | Sri. Raghunath S/o Vishwanath, Typist, Khanapur, Shahapura. |
| | **PW-3** | Sri. Veereshkumar S/o Siddaiah Swamy, SDA, Khanapur. |
| | **PW-4** | Sri. Bashiruddin S/o Bahadur Patel, Dy.SP, ACB, Bidar. |
| 2 | **Documents marked on behalf of the Disciplinary Authority Ex.P-1 to Ex.P-17** | |
| | **Ex.P.1, 1(a) & 1(b)** | Complaint given to Police Inspector, KLA, Yadagiri with signatures. |
| | **Ex.P.2, 2(a) & 2(b)** | Mahazar with signatures. |
| | **Ex.P.3** | Trap mahazar. |
| | **Ex.P.4** | Statement of complainant. |
| | **Ex.P.5** | List of currency note numbers. |
| | **Ex.P.6** | Photographs. |
| | **Ex.P.7** | Xerox copy of photographs. |
| | **Ex.P.8** | Details of conversation between DGO & complainant with Signature. |
| | **Ex.P.9** | Statement of DGO. |
| | **Ex.P. 10** | FIR with Signature. |

| | | |
|---|---|---|
| | **Ex.P. 11** | Sketch map. |
| | **Ex.P. 12** | Photographs. |
| | **Ex.P. 13** | Sketch map. |
| | **Ex.P. 14** | Chemical Test Report. |
| | **Ex.P. 15** | Letter dtd: 27/05/2013 addressed by Tahasildar, Yadagiri. |
| | **Ex.P. 16** | Letter dtd: 27/05/2013 addressed by Tahasildar, Yadagiri with enclosure. |
| | **Ex.P. 17** | Order of Competent Authority & DC, Yadagiri. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Sanganabasava S/o Shivananda, Village Accountant, Hunasagi, Yadagiri. |
| 4 | **Documents marked on behalf of the DGOs through the complainant** | |
| | **Ex.D.1** | Annexure-I/Copy of mutation No.21. |
| | **Ex.D.2** | Annexure-II/Copy of mutation No.20. |
| | **Ex.D.3** | Annexure-III/Copy of mutation register No.30. |
| | **Ex.D.4** | Annexure-IV/Copy of mutation register No.57. |

Dated this the 9th June, 2022

Sd/- 9/6/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.